SC:5/2024
PW:08 CW:02

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 5/2024

| | |
|---|---|
| PW | 08 |
| CW | 02 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 27.07.2026.

| | | |
|---|---|---|
| ಸಾಕ್ಷಿಯ ಹೆಸರು | : | ಹೈದರ್ ವಲ್ಲಿ |
| ತಂದೆಯ ಹೆಸರು | : | ಅಬ್ದುಲ್ ರೆಹಮನ್ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಕಾರ್ಪೆಂಟರ್ ಕೆಲಸ |
| ವಾಸಸ್ಥಳ | : | 3 ನೇ ವಾರ್ಡ್ , ಬಾಗೇಪಲ್ಲಿ ಟೌನ್ |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ಈ ಕೇಸಿನಲ್ಲಿ ಮೃತ ನಿರ್ಮಲ ನನಗೆ ಗೊತ್ತಿರುವುದಿಲ್ಲ , 1 ನೇ ಆರೋಪಿ ಗೊತ್ತು . 1 ನೇ ಆರೋಪಿಯ ಮೊದಲನೇ ಹೆಂಡತಿ ಗೊತ್ತು ಆದರೆ 2 ನೇ ಹೆಂಡತಿ ಗೊತ್ತಿರುವುದಿಲ್ಲ . ಚಾಸಾ.1 ಗೊತ್ತಿಲ್ಲ , ಚಾಸಾ.3,4 ರವರು ಗೊತ್ತು . ಉಳಿದ ಸಾಕ್ಷಿದಾರರು ಗೊತ್ತಿರುವುದಿಲ್ಲ . ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳ ಪರಿಚಯ ಇರುತ್ತದೆ .

2. 1 ನೇ ಆರೋಪಿಯ ಮದುವೆ ಯಾರ ಜೊತೆ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ . ಮೃತ ನಿರ್ಮಲ 1 ನೇ ಆರೋಪಿಗೆ ಏನು ಆಗಬೇಕು ಎಂದು ಗೊತ್ತಿರುವುದಿಲ್ಲ . ಮೃತ

ನಿರ್ಮಲ ಸತ್ತು ಹೋಗಿ ಎಷ್ಟು ವರ್ಷಗಳಾಗಿರುತ್ತದೆ ಎಂದರೆ ಗೊತ್ತಿಲ್ಲ . ಮೃತ ನಿರ್ಮಲ ಹೇಗೆ ಸತ್ತಿರುತ್ತಾಳೆ ಮತ್ತು ಯಾವ ಕಾರಣಕ್ಕಾಗಿ ಸತ್ತಿರುತ್ತಾಳೆ ಎಂದು ನನಗೆ ಗೊತ್ತಿರುವುದಿಲ್ಲ . ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ .

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

3. 1 ಮತ್ತು 2 ನೇ ಆರೋಪಿತರು ಮತ್ತು ಮೃತ ನಿರ್ಮಲ ರವರು ನಮ್ಮ ಮನೆಯ ಹಿಂದಿನ ಬೀದಿಯಲ್ಲಿ ವಾಸವಾಗಿದ್ದರು ಹಾಗೂ 1 ನೇ ಆರೋಪಿ ಮೃತ ನಿರ್ಮಲ ಳನ್ನು ಮದುವೆ ಆಗಿರುತ್ತಾನೆ ಆ ವಿಷಯ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ . ನಾನು ಪೊಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ ಆರೋಪಿಗಳು ಹಾಗೂ ಮೃತ ನಿರ್ಮಲ ನಮ್ಮ ಪಕ್ಕದ ಮನೆಯ ವಾಸಿಗಳಾಗಿರುತ್ತಾರೆ ಹಾಗೂ 1 ನೇ ಆರೋಪಿಯ ಮೊದಲ ಹೆಂಡತಿ ಮೃತ ಪಟ್ಟಿದ್ದು ನಂತರ 1 ನೇ ಆರೋಪಿಯು ಮೃತ ನಿರ್ಮಲ ರವರನ್ನು ಮದುವೆ ಮಾಡಿಕೊಂಡು ಬಂದಿದ್ದು ಮೃತಳು ಈಗಲೂ ಸಹಾ ಅವರ ಸೋದರ ಮಾವನಾದ ಶ್ರೀನಿವಾಸನ ಜೊತೆ ಮದುವೆ ಆಗಿದ್ದು ಮದುವೆ ಆದ 1 ವಾರಕ್ಕೆ ಶ್ರೀನಿವಾಸ ನಿರ್ಮಲಳನ್ನು ಬಿಟ್ಟು ಹೋಗಿದ್ದು ಅಂದಿನಿಂದ ನಿರ್ಮಲ ಅವರ ಮನೆಯಲ್ಲಿ ಇದ್ದು 1 ನೇ ಆರೋಪಿಯು ಮೃತ ನಿರ್ಮಲ ಮನೆಗೆ ಹೋಗಿ ಅವರ ತಂದೆಯನ್ನು ಮಾತನಾಡಿ ನಿರ್ಮಲಳನ್ನು ಮದುವೆ ಮಾಡಿಕೊಡಬೇಕು ಎಂದು ನಾನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಕೇಳಿ ಅವರನ್ನು ಒಪ್ಪಿಸಿ ಆಂಧ್ರಪ್ರದೇಶದ ಸೋಮಘಟ್ಟ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಮದುವೆ ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ .

4. ಮದುವೆ ಆದ ಸುಮಾರು 15-20 ದಿನಗಳ ಕಾಲ ಇಬ್ಬರೂ ಅನ್ಯೋನ್ಯವಾಗಿ ಇದ್ದೆವು . ನಂತರ 1 ನೇ ಆರೋಪಿ ಮನೆಗೆ 2 ನೇ ಆರೋಪಿ ಬಂದಿದ್ದು ಅಂದಿನಿಂದ 1 ನೇ

ಆರೋಪಿಗೂ ಮತ್ತು ಮೃತ ನಿರ್ಮಲಳಾಗೂ ಸಂಸಾರ ವಿಚಾರದಲ್ಲಿ ಗಲಾಟೆಗಳು ಆಗಿದ್ದು ಆರೋಪಿತರು ಇಬ್ಬರೂ ಮೃತಳಿಗೆ ಹೊಡೆದು , ತಿನ್ನಲು ಸರಿಯಾಗಿ ಊಟ ಕೊಡದೇ ಮನೆಯಿಂದ ಹೊರಗೆ ಹಾಕಿದ್ದು ನಿರ್ಮಲಳು ತವರು ಮನೆಗೆ ಹಲವಾರು ಬಾರಿ ಬಂದಿದ್ದು 1 ನೇ ಆರೋಪಿಗೆ ಬುದ್ದಿ ಹೇಳಿದ್ದರೂಾ ಸಹಾ ಸರಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ . ನಂತರ ದಿಃ06.09.2022 ರಂದು ರಾತ್ರಿ ಆರೋಪಿತರು ಇಬ್ಬರೂ ನಿರ್ಮಲಾಳ ಮೇಲೆ ಗಲಾಟೆ ಮಾಡಿ ಮನೆಯಿಂದ ಹೊರಗೆ ಹೋಗಿ ಎಂದು ಬೈಯ್ಯುತ್ತಿರುವುದನ್ನು ನಾನು ಸಹಾ ಕೇಳಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ . ದಿಃ07.09.2021 ರಂದು ಬೆ.9.00 ಗಂಟೆ ಸಮಯದಲ್ಲಿ ಆರೋಪಿತರಿಬ್ಬರೂ ನಿರ್ಮಲಳಾನ್ನು ಆಕೆಯ ಬಟ್ಟೆಗಳೊಂದಿಗೆ ಮನೆಯಿಂದ ಹೊರಗೆ ಹಾಕಿ ಮನೆಯ ಬೀಗ ಹಾಕಿಕೊಂಡು ಹೋಗಿದ್ದು ಆ ಸಮಯದಲ್ಲಿ ನಿರ್ಮಲಾಳ ತಮ್ಮನಾದ ಈಶ್ವರಪ್ಪ ರವರು ಆರೋಪಿಯ ಮನೆಯ ಬಳಿ ಹೋಗಿ ನಿರ್ಮಲಾಳನ್ನು ಮಾತನಾಡಿಸಿದಾಗ ಆಕೆಯು ತಾನು ರಾತ್ರಿಯಿಂದ ಊಟ ಮಾಡಿಲ್ಲ ಎಂದು ಹೇಳಿದಾಗ ಈಶ್ವರಪ್ಪ ಹೊಟೇಲ್ ನಿಂದ ಊಟ ತೆಗೆದುಕೊಂಡು ಬಂದು ಹೇಳಿ ಹೋಗಿದ್ದು ನಂತರ ನಾವು ಮನೆಯಲ್ಲಿ ಇದ್ದಾಗ ಸ್ವಲ್ಪ ಸಮಯದಲ್ಲಿ ಈಶ್ವರಪ್ಪ ಬಂದು ತನ್ನ ಅಕ್ಕ ನಿರ್ಮಲರವರು ನೇಣು ಬಿಗಿದುಕೊಂಡಿರುವುದಾಗಿ ಕಿರುಚಿಕೊಂಡಾಗ ನಾವುಗಳು ಮನೆಯಿಂದ ಹೊರಗೆ ಓಡಿ ಬಂದು ನೋಡಿದಾಗ ನಿರ್ಮಲಾಳು ವಾಸವಾಗಿದ್ದ ಮನೆಯ ಬಾಗಿಲ ಪಕ್ಕದಲ್ಲಿ ಇದ್ದ ಕಿಟಕಿಗೆ ವೇಲಿನಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು ನಂತರ ಐದರಾಲಿರವರ ಮನೆಯಿಂದ ಚಾಕುವನ್ನು ತಂದು ಕೊಟ್ಟಾಗ ಈಶ್ವರಪ್ಪ ವೇಲನ್ನು ಕಟ್ ಮಾಡಿ ನಿರ್ಮಲಳನ್ನು ಇಳಿಸಿಕೊಂಡು ನೋಡಿದಾಗ ನಿರ್ಮಲರವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ . ನಂತರ ನಿರ್ಮಲ ರವರ ಮೃತ ದೇಹವನ್ನು ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ಶವತನಿಖಾ ಪಂಚನಾಮೆಯ ಸಮಯದಲ್ಲಿ ತಾ.ದಂಡಾಧಿಕಾರಿಗಳು ಮಹಿಳಾ ಪೊಲೀಸರೊಂದಿಗೆ ಪರಿಶೀಲಿಸುತ್ತಿದ್ದಾಗ ನಿರ್ಮಲಾಳ ಬಳಿ ಅವರು ಬರೆದಿರುವ 3 ಪುಟಗಳ ಡೆತ್ ನೋಟ್ ಸಿಕ್ಕಿದ್ದು ಅವುಗಳನ್ನು ಪರಿಶೀಲಿಸಿದಾಗ ಅವುಗಳನ್ನ ನಿರ್ಮಲ ಬರೆದಿರುವ ಕೈ ಬರವಣಿಗೆಯ ಡೆತ್ ನೋಟ್ ಸಿಕ್ಕಿರುತ್ತದೆ ಎಂದು

ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ . ಈ ರೀತಿ ನಾನು ಪೊಲೀಸರ ಮುಂದೆ ನಿಪಿ.13 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ .

5. ನನಗೆ ಘಟನೆಯ ಬಗ್ಗೆ ಮಾಹಿತಿ ಇದ್ದು, ಆ ಬಗ್ಗೆ ನಾನು ನಿಪಿ-13 ರಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಪಾಟೀ ಸವಾಲು ಏನೂ ಇರುವುದಿಲ್ಲ .

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ 27.07.2026 ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು )**

ಓದಿ ಹೇಳಿ ಕೇಳಿ ಸರಿ ಇದೆ

sd/-

**(ಸಿದ್ದಣ್ಣ.ಬಿ.ಹಂದ್ರಾಳ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.